ಮಸೀದಿಗಳಿಗೆ ಹಣ ಬಿಡುಗಡೆ ಮಾಡಿದ ಬಗ್ಗೆ.

1237 - ಶ್ರೀ ಡಿ.ಜಿ. ಹೇಮಾವತಿ (ಶಾಂತಿನಗರ) : ಮಾನ್ಯ ಗೃಹ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರವು 1997-98ನೇ ಸಾಲಿನಲ್ಲಿ ಬೆಂಗಳೂರು ನಗರದಲ್ಲಿರುವ ಮಸೀದಿಗಳ ಅಭಿವೃದ್ಧಿಗಾಗಿ ಬಿಡುಗಡೆ ಮಾಡಿದ ಹಣ?*

ಆ) *ಇದರಲ್ಲಿ ಶಾಂತಿನಗರ ವಿಧಾನ ಸಭಾ ಕ್ಷೇತ್ರಕ್ಕೆ ಖರ್ಚು ಮಾಡಲಾದ ಹಣ ಎಷ್ಟು?*

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಸರ್ಕಾರವು 1997-98ನೇ ಸಾಲಿನಲ್ಲಿ ಬೆಂಗಳೂರು ನಗರದಲ್ಲಿರುವ ಮಸೀದಿಗಳ ಅಭಿವೃದ್ಧಿಗಾಗಿ ಮಂಜೂರು ಮಾಡಿದ ಹಣ ರೂ.5,75,000.00

ಆ) ಇಲ್ಲ.

ಬೆಂಗಳೂರು ನಗರದಲ್ಲಿ ಫುಟ್ ಪಾತ್‌ಗಳಿಗೆ ಚಿಪ್ ಕಾರ್ಪೆಟಿಂಗ್.

1238 - ಶ್ರೀಮತಿ ಡಿ.ಜಿ. ಹೇಮಾವತಿ (ಶಾಂತಿನಗರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1997-98ರಲ್ಲಿ ಬೆಂಗಳೂರು ನಗರದಲ್ಲಿ ಫುಟ್ ಪಾತ್‌ಗಳಿಗೆ ಚಿಪ್ ಕಾರ್ಪೆಟಿಂಗ್ ಮಾಡುವ ಸಲುವಾಗಿ ಖರ್ಚು ಮಾಡಿರುವ ಹಣವೆಷ್ಟು?*

ಆ) *ಅದರಲ್ಲಿ, ಇದೇ ಅವಧಿಯಲ್ಲಿ ಶಾಂತಿನಗರ ವಿಧಾನ ಸಭಾ ಕ್ಷೇತ್ರದಲ್ಲಿ ಖರ್ಚು ಮಾಡಿರುವ ಹಣವೆಷ್ಟು?*

ಇ) *ಇಂದಿರಾನಗರದ 9 ಮತ್ತು 12ನೇ ಮುಖ್ಯರಸ್ತೆಗಳ ಫುಟ್‌ಪಾತ್‌ಗಳಿಗೆ ಚಿಪ್ ಕಾರ್ಪೆಟಿಂಗ್‌ಗಾಗಿ ಖರ್ಚು ಮಾಡಿರುವ ಹಣವೆಷ್ಟು? (ವಿವರ ನೀಡುವುದು)*

ಶ್ರೀ ಅನಂತ್‌ನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

ಅ) ಬೆಂಗಳೂರು ಮಹಾನಗರ ಪಾಲಿಕೆಯು 1997-98ರ ಅವಧಿಯಲ್ಲಿ ಫುಟ್ ಪಾತ್‌ಗಳಿಗೆ ಚಿಪ್ ಕಾರ್ಪೆಟಿಂಗ್ ಕೆಲಸವನ್ನು ತೆಗೆದುಕೊಂಡಿರುವುದಿಲ್ಲ.

ಹುಬ್ಬಳ್ಳಿ-ಧಾರವಾಡ ಮಹಾನಗರದ ಪೋಲೀಸ್ ಸ್ಟೇಷನ್‌ಗಳು.

1240 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಒಟ್ಟು ಎಷ್ಟು ಪೋಲೀಸ್ ಸ್ಟೇಷನ್‌ಗಳು ಇವೆ. ಅವುಗಳಲ್ಲಿರುವ ಒಟ್ಟು ಸಿಬ್ಬಂದಿ ವರ್ಗವೆಷ್ಟು?*

ಆ) *ಪಿ.ಎಸ್.ಐ., ಇನ್ಸ್‌ಪೆಕ್ಟರ್ ಹಾಗೂ ಅದಕ್ಕಿಂತ ಮೇಲ್ಪಟ್ಟು ಒಟ್ಟು ಅಧಿಕಾರಿಗಳ ಸಂಖ್ಯೆ ಎಷ್ಟು?*

ಇ) *ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಮೂರು ವರ್ಷಗಳಲ್ಲಿ ಯಾವುದೇ ಅವಧಿಯನ್ನು ಸೇರಿ 5 ವರ್ಷಕ್ಕೂ ಮೇಲ್ಪಟ್ಟು ಸೇವೆಯಲ್ಲಿರುವ ಪೋಲೀಸ್ ಅಧಿಕಾರಿಗಳೆಷ್ಟು (ಅವರುಗಳ ಹೆಸರುಗಳನ್ನೊಳಗೊಂಡ ಮಾಹಿತಿ ಒದಗಿಸುವುದು)*

ಈ) *ಸದರಿ ಮಹಾನಗರದಲ್ಲಿ 5 ವರ್ಷಕ್ಕೂ ಮೇಲ್ಪಟ್ಟು ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳನ್ನು ವರ್ಗ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ?*

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಒಟ್ಟು 16 ಪೋಲೀಸ್ ಠಾಣೆಗಳಿವೆ. ಅವುಗಳಲ್ಲಿರುವ ಪೋಲೀಸ್ ಅಧಿಕಾರಿ : ಸಿಬ್ಬಂದಿಗಳ ಪ್ರಸ್ತುತ ಹಾಗೂ ಮಂಜೂರಾದ ಹುದ್ದೆಗಳ ವಿವರಗಳನ್ನು ಇದರ ಕೆಳಗೆ ಕೊಡಲಾಗಿದೆ.

ಹುದ್ದೆ	ಮಂಜೂರಾತಿ	ಸದ್ಯ ಇರುವುದು
ಸಿ.ಓ.ಪಿ.	1	1
ಡಿ.ಸಿ.ಪಿ.	2	1
ಎ.ಸಿ.ಪಿ.	4	4
ಸಿ.ಪಿ.ಐ.	23	23
ಪಿ.ಎಸ್.ಐ.	32	32
ಎ.ಎಸ್. ಐ.	56	54
ಹೆಚ್.ಸಿ.ಗಳು	301	220
ಸಿ.ಪಿ.ಸಿ.ಗಳು	820	747
ಒಟ್ಟು	**1239**	**1082**

ಆ) ಪಿಎಸ್‌ಐ ಹಾಗೂ ಅವರ ಮೇಲಿನ ಒಟ್ಟು ಅಧಿಕಾರಿಗಳ ಸಂಖ್ಯೆ 61.

ಇದರಲ್ಲಿ 32 ಪಿಎಸ್‌ಐ, 23 ಸಿ.ಪಿ.ಐ, 4 ಎ.ಸಿ.ಪಿ., 1 ಡಿ.ಸಿ.ಪಿ. (1 ಖಾಲಿ) ಮತ್ತು 1 ಸಿ.ಓ.ಪಿ. ಹುದ್ದೆಗಳಿರುತ್ತವೆ.

ಇ) 2 ಪೋಲೀಸ್ ಇನ್ಸ್‌ಪೆಕ್ಟರುಗಳು 5 ವರ್ಷಕ್ಕೂ ಮೀರಿ ಇಲ್ಲಿ ಸೇವೆಯಲ್ಲಿದ್ದು ಅವರುಗಳ ಹೆಸರಿನ ಎದುರಿಗೆ ಅವರು ಕರ್ತವ್ಯಕ್ಕೆ ಬಂದ ವರ್ಷವನ್ನು ನಮೂದಿಸಲಾಗಿದೆ.

1) ಶ್ರೀ ಪೆಮ್ಮಯ್ಯ 1990

2) ಶ್ರೀ ಜಿ.ಆರ್. ಪಾಟೀಲ್ 1990

ಈ) ಈ ವಿಚಾರದ ಬಗ್ಗೆ ಪರಿಶೀಲಿಸಲಾಗುವುದು.

ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ಚುನಾವಣೆಯ ಸಂದರ್ಭದಲ್ಲಿ ನಡೆದ ಗಲಭೆ

1241 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಲ್ಲಿ ದಿನಾಂಕ 6.4.98ರಂದು ನಡೆದ ಮಹಾಪೌರರ ಚುನಾವಣೆಯ ಸಂದರ್ಭದಲ್ಲಿ ಸದಸ್ಯರು ಸಭಾ ಭವನವನ್ನು ಪ್ರವೇಶಿಸುತ್ತಿದ್ದಾಗ, ಕೆಲವೊಂದು ಸದಸ್ಯರ ಮೇಲೆ ಗುಂಡಾ ಜನರು ಹಲ್ಲೆ ಮಾಡಿ, ಮರಣಾಂತಿಕ ಪೆಟ್ಟುಗಳನ್ನು ನೀಡುತ್ತಿದ್ದ ಸಂದರ್ಭದಲ್ಲಿ ಅಲ್ಲಿದ್ದ ಪೋಲೀಸ್ ಅಧಿಕಾರಿಗಳು ಸದರಿ ಸದಸ್ಯರಿಗೆ ಯಾವುದೇ ರಕ್ಷಣೆ ನೀಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಬಂದಿದ್ದಲ್ಲಿ ನಿರ್ಲಕ್ಷತೆಯಿಂದ ವರ್ತಿಸಿರುವ ಈ ಪೋಲೀಸ್ ಅಧಿಕಾರಿಗಳ ಮೇಲೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

1) ದಿನಾಂಕ 6.4.98ರಂದು ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ಮೇಯರ್ ಮತ್ತು ಉಪಮೇಯರ್ ಸ್ಥಾನಗಳಿಗೆ ಚುನಾವಣೆ ನಡೆದಿದ್ದು, ಈ ಸಮಯದಲ್ಲಿ ಮಹಾನಗರ ಸಭೆಯ ಆವರಣದಲ್ಲಿ ಮತ್ತು ಸಭಾ ಭವನದ ಹತ್ತಿರ ಸಾಕಷ್ಟು ಪೋಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ಬಂದೋಬಸ್ತ್‌ಗಾಗಿ ನಿಯೋಜಿಸಲಾಗಿತ್ತು. ಸದರಿ ಬಂದೋಬಸ್ತ್ ಉಸ್ತುವಾರಿಯನ್ನು ಬೆಳಗಾವಿಯ ಹೆಚ್ಚುವರಿ ಪೋಲೀಸ್ ಅಧೀಕ್ಷಕರು ವಹಿಸಿದ್ದರು. ಮಹಾನಗರ ಸಭೆಯ ಆವರಣದಲ್ಲಿ ಬೆಳಿಗ್ಗೆ 8 ಗಂಟೆಯಿಂದ ಬಂದೋಬಸ್ತ್ ಮಾಡಲಾಗಿತ್ತು. ಸದರಿ ಚುನಾವಣೆಯ ಮತದಾರರಾದ ಕಾರ್ಪೊರೇಟರ್, ಎಂ.ಪಿ., ಎಂಎಲ್‌ಎ ಮತ್ತು ಚುನಾವಣಾ ಸಂಬಂಧದ ಅಧಿಕಾರಿಗಳನ್ನು ಹೊರತು ಪಡಿಸಿ ಬೇರೆ ಯಾರನ್ನೂ ಒಳಗೆ ಬಿಟ್ಟಿರಲಿಲ್ಲ.

ಬೆಳಗ್ಗೆ 11 ಗಂಟೆ ಸುಮಾರಿಗೆ ಪಕ್ಷಾಂತರ ಮಾಡಿದ ಕಾರ್ಪೊರೇಟರ್‌ಗಳು ಸಭಾ ಭವನದ ಕಡೆಗೆ ಹೊರಟಾಗ, ಇತರ ಕಾರ್ಪೊರೇಟರ್‌ಗಳು ಅವರನ್ನು ಹಿಡಿದುಕೊಳ್ಳಲು ಮತ್ತು ಬಿಡಿಸಿಕೊಳ್ಳಲು ಗಲಾಟೆ ಆರಂಭವಾಯಿತು. ಆ ಸಮಯದಲ್ಲಿ ಕೆಲವು ವಿವಿಧ ಪಕ್ಷದ ಕಾರ್ಯಕರ್ತರು ಈ ಗಲಾಟೆಯಲ್ಲಿ ಸೇರಿಕೊಂಡರು. ಸ್ಥಳದಲ್ಲಿದ್ದ ಪೋಲೀಸರು ಪರಿಸ್ಥಿತಿಯನ್ನು ತಹಬಂದಿಗೆ ತಕ್ಷಣವೇ ತಂದರು. ನಂತರ